ಆನಂದ. ಅವಳಿಗೆ ಅವುಗಳನ್ನು ತನ್ನ ತಾಯಿ ಅಜ್ಜಿಯವರಿಗೆ ತೋರಿಸುವ ತವಕವುಂಟಾಯಿತು.

ಅಜ್ಜಿ ತನ್ನ ಸಿಡಿಮಿಡಿಯನ್ನು ಅಡಗಿಸಿಡಲಿಲ್ಲ. 'ದೂರ ತೊಗೊಂಡೋಗು ಆ ದರಿದ್ರಾನ' ಎಂದು ಕಿರಿಚಿದಳು. ಅದಕ್ಕೆ, 'ಅಯ್ಯೋ ಹೆಡ್ಡಮ್ಮಾ' ಎಂದು ಬದಲು ಕೊಟ್ಟಳು ಹುಡುಗಿ.

ಶ್ರೀ ಪಂಚಮಿಯ ಶುಭ ದಿನ ಉದಿಸಿತು. ರೇವತಿ ಬಹುಬೇಗ ಸ್ನಾನ ಮಾಡಿ, ಹೊಸ ಬಟ್ಟೆಗಳನ್ನು ತೊಟ್ಟು ಮನೆಯ ಒಳಗೆ ಹೊರಗೆ ಸುಳಿದಾಡಿದಳು, ವಾಸುವಿಗಾಗಿ ಅಸಹನೆಯಿಂದ ಕಾಯುತ್ತಾ. ಅಜ್ಜಿಯ ಹೆದರಿಕೆಯಿಂದಾಗಿ ಕಲಿಕೆಯ ಮೊದಲ ದಿನ ಸಾಮಾನ್ಯವಾಗಿರುವ ಸಡಗರ ಸಂಭ್ರಮಗಳು ಅಷ್ಟಾಗಿ ಕಾಣಲಿಲ್ಲ. ಬೆಳಗ್ಗೆ ಆರು ಗಂಟೆಗೆ ವಾಸು ಬಂದು ಅವಳಿಗೆ ಅ ಆ ಇ ಈ ಉ ಊ... ಅಕ್ಷರಗಳನ್ನು ಹೇಳಿಕೊಟ್ಟ.

ಅಭ್ಯಾಸ ಹೀಗೆ ಮುಂದುವರಿಯಿತು. ವಾಸು ಒಂದು ದಿನವೂ ತಪ್ಪಿಸಿಕೊಳ್ಳಲಿಲ್ಲ.

ಆಮೇಲೆ ಎರಡು ವರ್ಷ ಸಾಕಷ್ಟು ಕಲಿತಳು, ರೇವತಿ. ಮಧು ರಾವ್ ಅವರ ಎಲ್ಲ ಶಿಶುಪ್ರಾಸಗಳೂ ಅವಳ ನಾಲಗೆಯ ಮೇಲಿದ್ದವು. ಅವುಗಳನ್ನು ಒಂದಿಷ್ಟೂ ತಡವರಿಸದೆ ಹೇಳುತ್ತಿದ್ದಳು.

ಒಂದು ರಾತ್ರಿ ಶ್ಯಾಮಬಂಧು ಅವರು ಬಹುದಿನಗಳಿಂದ ತಾವು ಚರ್ಚಿಸುತ್ತಿದ್ದ ವಿಷಯವನ್ನು ಮುಗಿಸಬೇಕೆನ್ನುವಂತೆ, 'ಅಮ್ಮಾ, ಏನು ಅನಿಸುತ್ತೆ ನಿಂಗೆ?' ಎಂದು ತಮ್ಮ ತಾಯಿಯನ್ನು ಕೇಳಿದರು.

'ಒಳ್ಳೆಯದಾಯಿತು. ಆದರೆ, ಅವನ ಜಾತಿ ಯಾವುದು ಅಂತ ಗೊತ್ತಾ ನಿಂಗೆ?' ಎಂದು ಕೇಳಿದಳು ಮುದುಕಿ.

'ಅದನ್ನೇ ನಾನೂ ತಿಳಕೋಬೇಕೂ ಅಂತಿದ್ದೆ. ಅವನು ಬಡವ ಇರಬಹುದು, ಆದರೆ ಒಳ್ಳೆ ಮನೆಯಿಂದ ಬಂದವನು. ಪಕ್ಕಾ ಕರಣಿಕ.'

'ಒಳ್ಳೇದು. ಆಸ್ತಿಪಾಸ್ತಿಗಿಂತ ಜಾತೀಗೇ ಹೆಚ್ಚು ಬೆಲೆ. ನಮ್ಮ ಜೊತೆ ಇರೋಕೆ ಒಪ್ತಾನಾ?'

'ಯಾಕೆ ಒಪ್ಪೋಲ್ಲ? ಅವನಿಗಿರೋ ಬಂಧುಗಳು ಅಂದರೆ ಅವನ ಚಿಕ್ಕಪ್ಪ, ಚಿಕ್ಕಮ್ಮ ಅಷ್ಟೆ. ಅವರ ಜೊತೇನೇ ಇರಬೇಕು ಅಂತ ಅವನೇನೂ ಹೇಳಲಾರ.'

ರೇವತಿಗೆ ಇದನ್ನೆಲ್ಲ ಕೇಳಿ ಏನು ಅರ್ಥವಾಯಿತೋ ಅವಳಿಗೇ ಗೊತ್ತು. ಆದರೆ, ಅವಳಲ್ಲಿ ಅದೇನೋ ಬದಲಾವಣೆ ಕಾಣಿಸಿಕೊಂಡದ್ದಂತೂ ನಿಜ. ವಾಸುವಿನ ಜೊತೆ ಹೆಚ್ಚು ನಾಚಿಕೆಯಿಂದ ವರ್ತಿಸತೊಡಗಿದ್ದನ್ನು ಯಾರೂ ನೋಡಬಹುದಿತ್ತು. ಸಾಯಂಕಾಲದ ಹೊತ್ತು ಅವಳು ಯಾರಿಗೋ ಕಾಯುತ್ತಿರುವವಳಂತೆ ಮುಂಬಾಗಿಲ ಬಳಿಯೇ ಇರುತ್ತಿದ್ದುದನ್ನು ನೋಡಿ ಅವಳ ಅಜ್ಜಿಗೆ ತುಂಬ ಕಿರಿಕಿರಿಯಾಗುತ್ತಿತ್ತು. ಆದರೆ, ವಾಸು ಆಗಮಿಸಿದ್ದೇ ಅವಳು ಮನೆಯೊಳಗೆ ಅಡಗಿಕೊಳ್ಳುತ್ತಿದ್ದಳು. ಅಭ್ಯಾಸ ಮಾಡುವುದಕ್ಕಾಗಿ ಅವಳು ಹೊರಗೆ ಬರುವವರೆಗೂ ಅವನಿಗೆ ತುಸು ಚಡಪಡಿಕೆಯಾಗುತ್ತಿತ್ತು. ವಿನಾಕಾರಣ ನಾಚಿಕೆಯಿಂದ ಕೆಂಪಾಗುತ್ತಿದ್ದ, ನಗುತ್ತಿದ್ದ ಅವಳು ತನ್ನ ಪಾಠಗಳನ್ನು ಜೋರಾಗಿ ಓದದೆ ಅವನ ಪ್ರಶ್ನೆಗಳಿಗೆ ಊಂ ಉಹೂಂ ಎಂದಷ್ಟೇ ಉತ್ತರಿಸುತ್ತಿದ್ದಳು. ಆ ದಿನದ ಪಾಠ ಮುಗಿದದ್ದೇ ಅವಳು ತನ್ನ ಮುಸಿಮುಸಿ ನಗುವನ್ನು ತಡೆದುಕೊಳ್ಳಲು ಹೆಣಗುತ್ತ ಮನೆಯೊಳಗೆ ನುಸುಳಿಕೊಳ್ಳುತ್ತಿದ್ದಳು.

ಒಂದು ಶ್ರೀ ಪಂಚಮಿ ಇನ್ನೊಂದು ಶ್ರೀ ಪಂಚಮಿಯನ್ನು ಅನುಸರಿಸಿಕೊಂಡು ಹೋಯಿತು; ಎರಡು ವರ್ಷಗಳೇ ಕಳೆದವು. ವಿಧಿಯ ಕೈವಾಡ ವಿಚಿತ್ರವಾದದ್ದು, ನಿಗೂಢವಾದದ್ದು. ಎರಡು ದಿನಗಳು ಒಂದೇ ರೀತಿ ಇರುವುದಿಲ್ಲ. ಒಂದು ಫಾಲ್ಗುಣದ ದಿನ ಇದ್ದಕ್ಕಿದ್ದಂತೆ ಕಾಲರಾ ಸಾಂಕ್ರಾಮಿಕ ಕಾಣಿಸಿಕೊಂಡಿತು.

ಬೆಳಗ್ಗೆಯೇ ಶ್ಯಾಮಬಂಧು ಕಾಲರಾ ರೋಗದಿಂದ ಹಾಸಿಗೆ ಹಿಡಿದಿದ್ದಾರೆಂಬ ಸುದ್ದಿ ಹಳ್ಳಿಯಲ್ಲಿ ಹಬ್ಬಿತು. ಕೆಡುಕಿನ ಮಾರಿ ಮಂಕರಿಯೊಂದನ್ನು ಹಿಡಿದುಕೊಂಡು ಪೊರಕೆಯಿಂದ ತಲೆಗಳನ್ನು